# ನಿಮ್ಮೊಡನೆ

## ಅನ್ನ, ಜ್ಞಾನ ಮತ್ತು ಕನ್ನಡ

ಪ್ರಸ್ತುತ ಕರ್ನಾಟಕದಲ್ಲಿನ ಶೈಕ್ಷಣಿಕ ಪರಿಸರ ಹೇಗಿದೆಯೆಂದರೆ, ಕನ್ನಡ ಮಾಧ್ಯಮದ ಬಗ್ಗೆ ಪ್ರೀತಿಯುಳ್ಳ ಪೋಷಕರು ಕೂಡ ತಮ್ಮ ಮಕ್ಕಳನ್ನು ಅನಿವಾರ್ಯವಾಗಿ ಇಂಗ್ಲಿಷ್ ಶಾಲೆಗಳಿಗೆ ಕಳುಹಿಸುತ್ತಿದ್ದಾರೆ. ಇದರರ್ಥ, ಆ ಪೋಷಕರಿಗೆ ಕನ್ನಡದ ಬಗ್ಗೆ ಕಳಕಳಿ ಇಲ್ಲವೆಂದಲ್ಲ. ಆದರೆ, ಲೌಕಿಕದ ಲೆಕ್ಕಾಚಾರಗಳ ಎದುರು ಭಾಷಾಪ್ರೇಮ ಹಿನ್ನೆಲೆಗೆ ಸರಿಯುತ್ತದೆ.

ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಮಕ್ಕಳು ಕಲಿಕೆಯ ಮಾಧ್ಯಮವನ್ನಾಗಿ ಯಾವ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬೇಕು ಎನ್ನುವ ನಿರ್ಧಾರ ಪೋಷಕರಿಗೆ ಸಂಬಂಧಿಸಿದ್ದು ಎಂದು ಸುಪ್ರೀಂಕೋರ್ಟ್ ನೀಡಿರುವ ತೀರ್ಪು ಕನ್ನಡಿಗರಲ್ಲಿ ಸಹಜವಾಗಿಯೇ ತಳಮಳ ಉಂಟುಮಾಡಿದೆ. 'ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಕಲಿಕಾ ಮಾಧ್ಯಮದ ರೂಪದಲ್ಲಿ ಮಾತೃಭಾಷೆಯನ್ನು ಹೇರುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ. ಇಂಥ ನಿರ್ಬಂಧದಿಂದಾಗಿ ಸಂವಿಧಾನದ 19, 29, 30ನೇ ವಿಧಿಗಳು ಕಲ್ಪಿಸಿರುವ ಮೂಲಭೂತ ಹಕ್ಕುಗಳಿಗೆ ಧಕ್ಕೆಯಾಗುತ್ತದೆ' ಎನ್ನುವುದು ಕೋರ್ಟ್ ತೀರ್ಪಿನ ಸಾರಾಂಶ. ಈ ಆದೇಶದಿಂದಾಗಿ, 'ಒಂದರಿಂದ ನಾಲ್ಕನೇ ತರಗತಿಯವರೆಗೆ ಮಾತೃಭಾಷೆ ಅಥವಾ ರಾಜ್ಯದ ಪ್ರಾದೇಶಿಕ ಭಾಷೆಯಲ್ಲೇ ಶಿಕ್ಷಣ ನೀಡಬೇಕು' ಎಂದು 1994ರಲ್ಲಿ ಕರ್ನಾಟಕ ಸರ್ಕಾರ ಹೊರಡಿಸಿದ್ದ ಆದೇಶ ಬೆಲೆ ಕಳೆದುಕೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಕನ್ನಡದ ಭವಿಷ್ಯದ ಕುರಿತಂತೆ ನಾಡಿನಾದ್ಯಂತ ಆತಂಕದ ಮಾತುಗಳು ಕೇಳಿಸುತ್ತಿವೆ. ಕನ್ನಡ ಮಾಧ್ಯಮದ ಹಿತಾಸಕ್ತಿ ಕಾಯಲಿಕ್ಕಾಗಿ ಹೊಸ ಕಾಯ್ದೆ ತರುವ ಬಗ್ಗೆ ರಾಜ್ಯ ಸರ್ಕಾರ ಚಿಂತಿಸುತ್ತಿದೆ.

ಕನ್ನಡದ ನಾಳೆಗಳ ಬಗ್ಗೆ ಆತಂಕ ಉಂಟುಮಾಡಿರುವ ಕೋರ್ಟ್ ತೀರ್ಪು ಇವತ್ತಿನ ಕನ್ನಡ ಸಂದರ್ಭದ ಆತ್ಮಾವಲೋಕನಕ್ಕೂ ಕಾರಣವಾಗುವಂತಿದೆ. ಕಾನೂನುಗಳನ್ನು ರೂಪಿಸುವುದರಿಂದ ಅಥವಾ ನ್ಯಾಯಾಲಯದ ತೀರ್ಪುಗಳಿಂದ ಭಾಷೆ ಉಳಿಯುವುದಿಲ್ಲ ಎನ್ನುವುದರತ್ತ ನಮ್ಮ ಗಮನ ಹರಿಯಬೇಕಾಗಿದೆ. ಹಾಗೆ ನೋಡಿದರೆ ಕೋರ್ಟ್ ತೀರ್ಪಿಗಿಂತಲೂ ಕನ್ನಡಕ್ಕೆ ಹೆಚ್ಚಿನ ಅಪಾಯ ಇರುವುದು ನಮ್ಮ ರಾಜಕಾರಣಿಗಳಿಂದಲೇ. ಇಂಥ ಸಂದರ್ಭದಲ್ಲಿ ಶಿಕ್ಷಣ ಮಾಧ್ಯಮವಾಗಿ ಕನ್ನಡದ ಬಳಕೆಯ ಕುರಿತು ಆಮೂಲಾಗ್ರ ಬದಲಾವಣೆ ಆಗಬೇಕಾಗಿದೆ.

ಪ್ರಸ್ತುತ ಕರ್ನಾಟಕದಲ್ಲಿನ ಶೈಕ್ಷಣಿಕ ಪರಿಸರ ಹೇಗಿದೆಯೆಂದರೆ, ಕನ್ನಡ ಮಾಧ್ಯಮದ ಬಗ್ಗೆ ಪ್ರೀತಿಯುಳ್ಳ ಪೋಷಕರು ಕೂಡ ತಮ್ಮ ಮಕ್ಕಳನ್ನು ಅನಿವಾರ್ಯವಾಗಿ ಇಂಗ್ಲಿಷ್ ಶಾಲೆಗಳಿಗೆ ಕಳುಹಿಸುತ್ತಿದ್ದಾರೆ. ಇದರರ್ಥ, ಆ ಪೋಷಕರಿಗೆ ಕನ್ನಡದ ಬಗ್ಗೆ ಕಳಕಳಿ ಇಲ್ಲವೆಂದಲ್ಲ. ಆದರೆ, ಲೌಕಿಕದ ಲೆಕ್ಕಾಚಾರಗಳ ಎದುರು ಭಾಷಾಪ್ರೇಮ ಹಿನ್ನೆಲೆಗೆ ಸರಿಯುತ್ತದೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರ ಮುಂಚೂಣಿಯಲ್ಲಿರುವ ಆಧುನಿಕ ಜಗತ್ತಿನಲ್ಲಿ ಸ್ಪರ್ಧಿಸಲು ಮಕ್ಕಳಿಗೆ ಇಂಗ್ಲಿಷ್ ಅನಿವಾರ್ಯ ಎಂದು ಪೋಷಕರಿಗೆ ಅನ್ನಿಸುವುದು ಮನುಷ್ಯಸಹಜ.

ಕನ್ನಡ ಮಾಧ್ಯಮ ಶಾಲೆಗಳ ಸ್ಥಿತಿಗತಿಯ ಅವಲೋಕನಕ್ಕೂ ಇದು ಸಕಾಲ. ಗ್ರಾಮೀಣ ಪ್ರದೇಶಗಳಲ್ಲಿ ಅನೇಕ ಕನ್ನಡ ಶಾಲೆಗಳ ಸ್ಥಿತಿ ದನದ ಕೊಟ್ಟಿಗೆಗಳಂತಿವೆ. ಮಕ್ಕಳ ಕೊರತೆಯಿಂದಾಗಿ ಕೆಲವು ಶಾಲೆಗಳು ಮುಚ್ಚುತ್ತಿವೆ. ಇಂಥ ಶಾಲೆಗಳಿಂದ ಹೊರಬರುವ ವಿದ್ಯಾರ್ಥಿಗಳು ಕಾಲೇಜು ಹಂತದಲ್ಲಿ ಇಂಗ್ಲಿಷ್ ಮಾಧ್ಯಮದ ಮಕ್ಕಳೊಡನೆ ಕಲಿಕೆಯಲ್ಲಿ ಹೊಂದಾಣಿಕೆ ಸಾಧಿಸಲಾಗದೆ ಕೀಳರಿಮೆ ಅನುಭವಿಸಬೇಕಾಗುತ್ತದೆ. ಜತೆಗೆ ಈ ಶಾಲೆಗಳಲ್ಲಿ ನಾವು ಕಲಿಸುತ್ತಿರುವ ಕನ್ನಡದ ಗುಣಮಟ್ಟವಾದರೂ ಎಂಥದ್ದು? ಕನ್ನಡದ ಬಗ್ಗೆ ಯಾವ ಪ್ರಭುತ್ವವನ್ನೂ ಗಳಿಸಿಕೊಡದ ಆ ಪಠ್ಯಗಳು, ಮಕ್ಕಳಿಗೆ ಯಾವ ಭಾಷೆಯನ್ನೂ ಕಲಿಸಿಕೊಡದೆ ತ್ರಿಶಂಕುಗಳಾಗಿಸುತ್ತಿವೆ. ವಿಶ್ವವಿದ್ಯಾಲಯಗಳ ಕನ್ನಡ ಕೇಂದ್ರಗಳಿಂದ ಹೊರಬರುತ್ತಿರುವ ಹೊಸ ಪ್ರತಿಭೆಗಳನ್ನು ನೋಡಿದರೆ ನಮ್ಮ ಶೈಕ್ಷಣಿಕ ಕ್ರಮದ ಟೊಳ್ಳುತನ ಸ್ಪಷ್ಟವಾಗುತ್ತದೆ. ಇಂಥ ಸಂದರ್ಭದಲ್ಲಿ ಕಲಿಕೆಯ ಮಾಧ್ಯಮ ಕನ್ನಡವಾದರೂ ಇಂಗ್ಲಿಷ್ ಆದರೂ ವ್ಯತ್ಯಾಸವೇನಿಲ್ಲ.

ಕನ್ನಡದ ಸಂದರ್ಭದಲ್ಲಿ ಪ್ರಸ್ತುತ ಅತ್ಯಂತ ಜರೂರಾಗಿ ಆಗಬೇಕಾದುದು ಎರಡು ಸಂಗತಿಗಳು. ಮೊದಲನೆಯದು, ಇರುವ ಕನ್ನಡ ಶಾಲೆಗಳನ್ನು ಬಲಪಡಿಸುವುದು. ಅತ್ಯುತ್ತಮ ಕನ್ನಡ ಶಾಲೆಗಳಲ್ಲಿ ಇಂಗ್ಲಿಷ್ ಕಲಿಸುವ ಮೂಲಕವೂ ವಿದ್ಯಾರ್ಥಿಗಳನ್ನು ಸಶಕ್ತರನ್ನಾಗಿಸಬೇಕಿದೆ. ಏಕರೂಪ ಶಿಕ್ಷಣವನ್ನು ಜಾರಿಗೊಳಿಸುವ ಮೂಲಕ ಎಲ್ಲ ಮಕ್ಕಳಿಗೂ ಒಂದೇ ಬಗೆಯ ಕಲಿಕೆಯ ಸವಲತ್ತನ್ನು ಹೊಂದುವ ಕುರಿತೂ ಪ್ರಯತ್ನಗಳು ನಡೆಯಬೇಕಾಗಿದೆ. ಆಗಲೇ ಬೇಕಾದ ಮತ್ತೊಂದು ಮುಖ್ಯ ಕೆಲಸ, ಕನ್ನಡವನ್ನು ಅನ್ನದ ಮತ್ತು ಜ್ಞಾನದ ಭಾಷೆಯನ್ನಾಗಿಸುವುದು. ಕನ್ನಡ ಮಾಧ್ಯಮದಲ್ಲಿ ಕಲಿತವರಿಗೆ ಸರ್ಕಾರ ಪ್ರೋತ್ಸಾಹಕರ ವಾತಾವರಣ ಕಲ್ಪಿಸಬೇಕು. ಉದ್ಯೋಗಾವಕಾಶ ಇದೆ ಎಂದಾದರೆ ಕನ್ನಡ ಮಾಧ್ಯಮದ ಬಗ್ಗೆ ಪೋಷಕರಲ್ಲಿ ಸಹಜವಾಗಿಯೇ ಉತ್ಸಾಹ ವ್ಯಕ್ತವಾಗುತ್ತದೆ. ಈ ನಿಟ್ಟಿನಲ್ಲಿ ಕಲಿಕೆಯ ಸಾಮಗ್ರಿಗಳು ಕನ್ನಡದಲ್ಲಿ ದೊರೆಯುವಂತಾಗುವುದು ಬಹಳ ಮುಖ್ಯ.

ಕನ್ನಡ ಮಾಧ್ಯಮವನ್ನಾಗಿ ಉಳಿಸಿಕೊಳ್ಳುವ ಬಗ್ಗೆ ಕಾನೂನು ಪ್ರಕ್ರಿಯೆಗಳು ತಮ್ಮ ಪಾಡಿಗೆ ತಾವು ನಡೆಯುತ್ತಿರಲಿ. ಅದರ ಜೊತೆಜೊತೆಗೇ ಕನ್ನಡವನ್ನು ಅನ್ನದ ಭಾಷೆಯನ್ನಾಗಿ ರೂಪಿಸುವ ಪ್ರಯತ್ನವನ್ನು ರಾಜ್ಯ ಸರ್ಕಾರ ಮಾಡಬೇಕಾಗಿದೆ.

■ **ರಘುನಾಥ ಚ.ಹ.**



ಈಶ್ವರ್